# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 388 |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಸುನೀಲ್ ವಲ್ಯಾಪುರ (ವಿಧಾನ ಸಭೆಯಿಂಥ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 19.02.2024 |
| ಉತ್ತರಿಸುವ ಸಚಿವರು | : | ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಹೊಸದಾಗಿ ಎ.ಪಿ.ಎಲ್ ಮತ್ತು ಬಿ.ಪಿ.ಎಲ್ ಪಡಿತರ ಚೀಟಿ ವಿತರಿಸುವ ಕಾರ್ಯ ಪ್ರಗತಿಯಲ್ಲಿದೆಯೇ ಅಥವಾ ಸ್ಥಗಿತವಾಗಿದೆಯೇ; ಮಾಹಿತಿ ನೀಡುವುದು; ಸದರಿ ಕಾರ್ಯ ಸ್ಥಗಿತವಾಗಿರುವುದರಿಂದ ಹೊಸದಾಗಿ ಗೃಹಲಕ್ಷ್ಮೀ ಯೋಜನೆಗೆ ನೊಂದಾಯಿಸಲು ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಹೊಸದಾಗಿ ಪಡಿತರ ಚೀಟಿ ವಿತರಿಸುವ ಕಾರ್ಯ ಯಾವಾಗ ಪ್ರಾರಂಭಿಸಲಾಗುವುದು; | ಹೊಸ ಆದ್ಯತಾ ಪಡಿತರ ಚೀಟಿಯನ್ನು ಕೋರಿ ಸಲ್ಲಿಸಿರುವ ಅರ್ಜಿಗಳ ಬಾಕಿ ಇರುವ 2,95,986 ಅರ್ಜಿಗಳ ವಿಲೇವಾರಿ ಬಗ್ಗೆ ಸರ್ಕಾರದ ಆದೇಶ ಸಂಖ್ಯೆ: ಆನಾಸ 211 ಡಿಆರ್‌ಎ 2021, ದಿನಾಂಕ: 29.09.2023 ರನ್ವಯ ಆದೇಶಿಸಲಾಗಿರುತ್ತದೆ. ಸರ್ಕಾರದ ಆದೇಶದಂತೆ ಬಾಕಿ ಇರುವ ಹೊಸ ಆದ್ಯತಾ ಪಡಿತರ ಚೀಟಿಗಳನ್ನು ವಿಲೇವಾರಿ ಮಾಡಲು ರಾಜ್ಯದ ಎಲ್ಲಾ ಜಂಟಿ/ ಉಪ ನಿರ್ದೇಶಕರಿಗೆ ನಿರ್ದೇಶನ ನೀಡಲಾಗಿರುತ್ತದೆ. ಹೊಸ ಆದ್ಯತಾ ಪಡಿತರ ಚೀಟಿಗಳ ವಿಲೇವಾರಿ ಕಾರ್ಯ ಪ್ರಗತಿಯಲ್ಲಿರುತ್ತದೆ. ಈವರೆಗೆ 58,305 ಅರ್ಜಿಗಳಿಗೆ ಅನುಮೋದನೆ ನೀಡಲಾಗಿರುತ್ತದೆ. |
| ಆ | ಪಡಿತರ ಚೀಟಿ ತಿದ್ದುಪಡಿ ಹಾಗೂ ಹೊಸದಾಗಿ ನೀಡುವ ಪ್ರಕ್ರಿಯೆಯಲ್ಲಿ ಪದೇ ಪದೇ ತಾಂತ್ರಿಕ ದೋಷದಿಂದ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ರೈತರು ಬಡ ಕೂಲಿ ಕಾರ್ಮಿಕರು ಮಧ್ಯಮ ವರ್ಗದವರು ಹಾಗೂ ದೀನ ದಲಿತರು ದಿನದ ದುಡಿಮೆ ಬಿಟ್ಟು ಪಡಿತರ ಚೀಟಿ ಪಡೆಯಲು ಸರತಿ ಸಾಲಿನಲ್ಲಿ ದಿನ ಕಳೆಯುತ್ತಿದ್ದು, ಇದಕ್ಕೆ ಶಾಶ್ವತ ಪರಿಹಾರ ಕಂಡುಹಿಡಿಯಲು ಸರ್ಕಾರ ಚಿಂತನೆ ನಡೆಸಿದೆಯೇ; | ಆಹಾರ ದತ್ತಾಂಶವನ್ನು ನಿರ್ವಹಿಸುತ್ತಿರುವ ಸರ್ವರ್‌ಗಳಿಂದ ಮತ್ತು ಆಹಾರ ಅಪ್ಲಿಕೇಶನ್ ನಿಂದ ಕೇಂದ್ರ ಸರ್ಕಾರಕ್ಕೆ ಪ್ರತಿ ತಿಂಗಳು ಪಡಿತರ ಚೀಟಿಗಳ ವಿವರ ಮತ್ತು ವಿತರಣಾ ಡೇಟಾವನ್ನು ಆನ್‌ಲೈನ್ ಮುಖಾಂತರ ಸಲ್ಲಿಸಲಾಗುತ್ತಿದೆ.<br>ಇದರೊಂದಿಗೆ ಪ್ರತಿ ಮಾಹೆ ಆನ್‌ಲೈನ್ ಮುಖಾಂತರ ಪಡಿತರ ಹಂಚಿಕೆಯನ್ನು ಜನರೇಟ್ ಮಾಡಲು ಸರ್ವರ್ ಬಳಕೆಯಾಗುತ್ತಿದೆ. ತದನಂತರ ಪ್ರತಿ ಮಾಹೆಯ ಪಡಿತರ ವಿತರಣೆಯ ಪೊಸ್ (Point of Sale) ಮುಖಾಂತರ ಮಾಡಲಾಗುತ್ತಿದ್ದು, ಇದಕ್ಕಾಗಿ ಸರ್ವರ್ ಬಳಕೆಯಾಗುತ್ತಿದೆ. ಈ ಕಾರಣಗಳಿಂದಾಗಿ ಸರ್ವರ್ ಮೇಲೆ ಹೆಚ್ಚಿನ ಒತ್ತಡ ಇರುತ್ತದೆ. ಆದಾಗ್ಯೂ ಪ್ರತಿ ಮಾಹೆ 1 ರಿಂದ 10 ನೇ ತಾರೀಖಿನವರೆಗೆ ಪಡಿತರ ಚೀಟಿ ತಿದ್ದುಪಡಿಗೆ ಅವಕಾಶ ಕಲ್ಪಿಸಲಾಗಿರುತ್ತದೆ.<br>ಪ್ರಸ್ತುತ ಪ್ರತಿ ಮಾಹೆಯ ದಿನಾಂಕ 17 ರಿಂದ ದಿನಾಂಕ 25 |
| ಇ | ಬೆಂಗಳೂರು ಒನ್, ಗ್ರಾಮ ಒನ್, ಬಾಪೂಜಿ ಸೇವಾ ಕೇಂದ್ರ ಹಾಗೂ ಅಟಲ್‌ಜೀ, ಜನಸ್ನೇಹಿ ಕೇಂದ್ರ ಹೀಗೆ ಸೀಮಿತ ಕೇಂದ್ರಗಳಿಗೆ ಅನುಮತಿ ನೀಡಿರುವುದರಿಂದ ಪಡಿತರ ಚೀಟಿ ಪಡೆಯುವ | |

| | | |
|---|---|---|
| | ಸಾರ್ವಜನಿಕ ಸಂಖ್ಯೆ ಹೆಚ್ಚಾಗಿ ಈ ಕೇಂದ್ರಗಳ ಮೇಲೆ ಒತ್ತಡ ಬಿದ್ದು ಪ್ರತಿ ದಿನ ಒಂದು ಕೇಂದ್ರದಿಂದ 10 ರಿಂದ 15 ಪಡಿತರ ಚೀಟಿಗಳನ್ನು ಪಡೆಯಲಾಗುತ್ತಿದ್ದು ಇದರಿಂದ ಸಾರ್ವಜನಿಕರ ಸಮಯ ವ್ಯರ್ಥವಾಗುವುದಿಲ್ಲವೇ; ಸರ್ಕಾರದಿಂದ ಸಮಸ್ಯೆಗೆ ಶಾಶ್ವತ ಪರಿಹಾರ ಯಾವ ರೀತಿ ನೀಡಲಾಗುವುದು? (ಮಾಹಿತಿ ನೀಡುವುದು) | ರವರೆಗೆ ಸರ್ವರ್ ಮತ್ತು AHARA ಅಪ್ಲಿಕೇಶನ್ ಅನ್ನು DBT ಅನ್ನಭಾಗ್ಯ ಯೋಜನೆಗೆ ಸಹ ಉಪಯೋಗಿಸಿಕೊಳ್ಳಲಾಗುತ್ತಿದೆ. ಇದರಿಂದ ತಿಂಗಳ 20 ರಿಂದ 30 ರವರೆಗೆ ಸರ್ವರ್ ಗಳ ಮೇಲೆ ಹೆಚ್ಚಿನ ಒತ್ತಡ ಬೀಳುತ್ತಿರುವುದರಿಂದ ಪಡಿತರ ಚೀಟಿ ತಿದ್ದುಪಡಿಗೆ ನಿರಂತರವಾಗಿ ಅರ್ಜಿ ಸಲ್ಲಿಸಲು ಅವಕಾಶ ನೀಡುವುದು ಕಷ್ಟ ಸಾಧ್ಯವಾಗುತ್ತಿದೆ. ರಾಜ್ಯದಲ್ಲಿ ಪ್ರಸ್ತುತ ಬೆಂಗಳೂರು, ಮೈಸೂರು, ಕಲಬುರಗಿ, ಪ್ರದೇಶಗಳಿಗೆ 3 ಸರ್ವರ್ ಗಳನ್ನು ಬಳಸಲಾಗುತ್ತಿದೆ. ಈಗಿನ ಸರ್ವರ್‌ಗಳು ಹೆಚ್ಚಿನ ಒತ್ತಡ ಹೊರಲು ಸಾಧ್ಯವಾಗದ ಕಾರಣದಿಂದ ಉಧ್ಭವಿಸಿದ ಈ ಸಮಸ್ಯೆಯನ್ನು ನಿವಾರಿಸಲು ಆಹಾರ ತಂತ್ರಾಂಶದ ಸರ್ವರ್ ಗಳನ್ನು ಎನ್. ಐ. ಸಿ.ಯಿಂದ ಕೆ.ಎಸ್.ಡಿ.ಸಿಗೆ ವರ್ಗಾಯಿಸಲಾಗುತ್ತಿದೆ. ಅದರಂತೆ ಈ ತಂತ್ರಾಂಶದ Migration ಕಾರ್ಯವು ಪ್ರಗತಿ ಯಲ್ಲಿರುತ್ತದೆ. ಎನ್. ಐ. ಸಿ ಯಿಂದ ಕೆ.ಎಸ್.ಡಿ.ಸಿ'ಗೆ Migration ಕಾರ್ಯ ಪೂರ್ಣಗೊಂಡ ನಂತರ ಪಡಿತರ ಚೀಟಿಯಲ್ಲಿನ ಹೆಸರು ಸೇರ್ಪಡೆ/ತಿದ್ದುಪಡಿ ಬಗ್ಗೆ ನಿರಂತರವಾಗಿ ಅವಕಾಶ ಕಲ್ಪಿಸಲು ಸಾಧ್ಯವಾಗುತ್ತದೆ. |

ಆನಾಸ 49 ಡಿಆರ್‌ಎ 2024

(ಕೆ.ಹೆಚ್. ಮುನಿಯಪ್ಪ)

ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ

ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ

ಇಲಾಖಾ ಸಚಿವರು